ವಿರಾಟ ಪರ್ವದಲ್ಲಿ ಕೀಚಕನ ಹಾವಳಿಯಿಂದ ಪರಿತಪಿಸಿ ತನ್ನ ಸಂಕಷ್ಟವನ್ನು ಬಿನ್ನವಿಸಿಕೊಳ್ಳಲು ಭೀಮನಲ್ಲಿಗೆ ದ್ರೌಪದಿ ಬಂದು, ಅವರಿಬ್ಬರ ನಡುವೆ ಅರ್ಧರಾತ್ರಿಯಲ್ಲಿ ನಡೆಯುವ ಏಕಾಂತ ಸಂಭಾಷಣೆಯಲ್ಲಿ ಭೀಮ ಬಳಸುವ ಕೆಲವು ಪದಗಳು ಹೀಗಿವೆ... 'ಖುಲ್ಲ ಕುಠಾರರಿವರರಮನೆಯ ನಾಯ್ಗಳು ನಾವು ದೇಶಿಗರು', 'ನಿನ್ನ ಹರಿಬಕೆ ಮಿಸುಕುವವರಾವಲ್ಲ', 'ಬಳಿಕೇನು ಗಾದೆಯ ಬಳಕೆ ಕೆಲವರು ಗಳಿಸಿದೊಡೆ ಕೆಲರುಂಡು ಜಾರುವರು', 'ಈ ನಪುಂಸಕರೊಡನೆ ಹುಟ್ಟಿದ ನಾನು ಮೂಗುಳ್ಳವನೆ', 'ಇಂದು ಮೊದಲಾಗರಸಿ ನಾಲ್ವರಿಗೆ ನಾವೆಡೆಮುರಿದವರು, ಬಿಟ್ಟವರು ನಿನ್ನ ಸೂಳು ಪಾಳೆಯವ...' ಎಂಬೀ ಪದಗಳ ಪ್ರಯೋಗವಾಗಿರುತ್ತವೆ. ಇಂಥದೇ ಜನಪದ ನುಡಿಗಟ್ಟುಗಳು ಕೃತಿಯಲ್ಲಿ ಇಡಿಕಿರಿದಿವೆ. ಈಗಾಗಲೇ ಹೇಳಿದಂತೆ ಈತನ ಕೃತಿಯ ಜೀವಂತಿಕೆ ಇರುವುದೇ ಕಥೆಗಿಂತ ಜನಪದ ನುಡಿಯ ಜೀವಂತ ಭಾಷೆಯಲ್ಲಿ.

ಮೇಲೆ ಕಾಣಿಸಿದ ಕೆಲವು ಜನಪದ ನುಡಿಗಟ್ಟುಗಳಲ್ಲಿ 'ನಾವೆಡೆ ಮುರಿದವರು' ಎಂಬ ಒಂದೇ ಒಂದು ಪದ ಗಮನಿಸಿದರೂ ಕುಮಾರವ್ಯಾಸನಿಗೆ ಜನಪದ ಆಚರಣೆಗಳ ಅರಿವು ಏನಿದ್ದಿತೆಂಬುದು ತಿಳಿಯುತ್ತದೆ.

ಗ್ರಾಮಾಂತರ ಪ್ರದೇಶಗಳಲ್ಲಿ ವಿಚ್ಛೇದನಗೊಳ್ಳಬೇಕಾದ ಗಂಡ ಹೆಂಡತಿಯರಿಬ್ಬರ ಮನೆಯ ಕಡೆಯವರು ಎರಡು ಊರುಗಳ ನಡುವೆ ಇರಬಹುದಾದ ಗುಡಿಯ ಎಡೆಯಲ್ಲಿ ಸೇರಿ ಇಂದಿನಿಂದ ನಮ್ಮ ಸಂಬಂಧ ಮುರಿಯಲ್ಪಟ್ಟಿದೆ ಎಂದು ಕಡ್ಡಿಯೊಂದನ್ನು ಮುರಿದುಬಿಸಾಡಿದರೆ, ಅಲ್ಲಿಂದ ಗಂಡ ಹೆಂಡತಿಯರು ದೂರವಾದಂತೆ. ಮುಂದೆ ಯಾವ ಸಂಬಂಧವಿಲ್ಲದಂತೆ ಬಾಳಬೇಕಾಗುತ್ತದೆ. ಇದು ಕಡ್ಡಿ ಮುರಿಯುವುದು ಅಥವ ಎಡೆ ಮುರಿಯುವುದೆಂಬ ವಿವಾಹ ವಿಚ್ಛೇದನ ಆಚರಣೆ. ಇದನ್ನೇ ಭೀಮನು ದ್ರೌಪದಿಯ ಮುಂದೆ ನಾವು ಎಡೆ ಮುರಿದವರು ಎನ್ನುತ್ತಾನೆ. ಆ ನಿಮಿತ್ತವಾಗಿಯೇ ಸರತಿಯ ಸಾಲಿನ ನಿನ್ನ ದೇಹ ಸಂಬಂಧವನ್ನು ಇಂದಿನಿಂದ ಕಡಿದುಕೊಂಡಿರುವೆನೆಂಬ ಅರ್ಥದಲ್ಲಿ 'ಸೂಳು ಪಾಳೆಯ' ಎಂಬ ಮಾತನ್ನು ಬಳಸುತ್ತಾನೆ.

ಹೆಣ್ಣಿನ ದೈಹಿಕ ಸಂಬಂಧದಲ್ಲಿ ಗ್ರಾಮೀಣ ವಾತಾವರಣದಲ್ಲಿರುವ ಬಹುಶಃ ಎಲ್ಲಾ ಬಗೆಯ ಪದಗಳನ್ನು ಕುಮಾರವ್ಯಾಸ ಯಾವ ಸಂಕೋಚವೂ ಇಲ್ಲದೆ ಬಳಸುತ್ತಾನೆ. ಆತನು ಭಕ್ತ ಕವಿಯಾದರೂ ತಾನು ಬಲವಾಗಿ ನಂಬಿದ ಕೃಷ್ಣನನ್ನು ಜರಾಸಂಧನಿಂದ ಹೀಗಳೆಸುವಾಗ 'ಕೊಳಲು ರಾಗದ ರಹಿಯೋ, ಕಲ್ಲಿಯ ಕಲಸುಗೂಳೋ, ಹಳ್ಳಿಕಾತಿಯರೊಳಗುಡಿಯ ಹಾದರವೋ, ತುರುಗಾಹಿಗಳ ತೋವುಗಳೋ' ಎಂಬ ಮಾತುಗಳಿಂದ ನಿಂದಿಸುತ್ತಾನೆ. ಸಭಾಪರ್ವದಲ್ಲಿ ಕಾವ್ಯ ನಾಯಕಿ ದ್ರೌಪದಿಯನ್ನು ದುರ್ಯೋಧನನು ನಿಂದಿಸುವಾಗಲೂ 'ತೊತ್ತಿನ ಸವಡಿವೇಟದ ಸವಿಯ ಸುರಿಯಲಿ ಭಂಡಮಿಂಡರಲಿ' ಎಂಬ ಪದಗಳನ್ನು ಪ್ರಯೋಗಿಸಿದ್ದಾನೆ. ಉದ್ಯೋಗ ಪರ್ವದ ಕೃಷ್ಣ ಸಂಧಾನ ಸಂದರ್ಭದಲ್ಲಿ ದುರ್ಯೋಧನನು 'ಆ ಜೋಡೆಯರಲಿ ಜನಿಸಿದರನೀ ಬೀಡಾಡಿ ಕೂಡಿಕೊಂಡನು' ಎನ್ನುತ್ತಾನೆ. ಹೀಗಾಗಿ ಕುಮಾರವ್ಯಾಸನು ಅರಮನೆಯವನು, ಕೋಳಿವಾಡದವನು ಅಥವ ಗುಡಿಯಲ್ಲೇ ಧ್ಯಾನಗೈದು ಕೂತವನು ಎಂಬುದಕ್ಕಿಂತ ಅಸಾಧಾರಣ ಲೋಕ ಸಂಚಾರಿ, ಲೋಕಾನುಭವಿ, ಅನುಭಾವಿ ಎಂದುಕೊಳ್ಳಬೇಕಾಗಿದೆ.

★★★

ಜೀವಪರ ಭಾವದ ಕುಮಾರವ್ಯಾಸನಲ್ಲದೆ ಶರಣರೂ, ಕೀರ್ತನಕಾರರೂ ಯುದ್ಧ ವಿರೋಧಿ ನಿಲುವುಗಳನ್ನು ಕನ್ನಡ ಸಾಹಿತ್ಯ ಪರಂಪರೆಯ ಉದ್ದಕ್ಕೂ ನಿವೇದಿಸಿದ್ದಾರೆ. ಆ ಅರ್ಥದಲ್ಲೇ ಕುಮಾರವ್ಯಾಸನು ಯುದ್ಧಾರಂಭದಲ್ಲಿ ಅಲ್ಲ, ಯುದ್ಧದ ಕಡೆಯ ಭಾಗದಲ್ಲಿಯೂ ಕೃಷ್ಣ–ಅರ್ಜುನರ ಸಂವಾದದಲ್ಲಿ ತನ್ನ ಯುದ್ಧ ವಿರೋಧಭಾವವನ್ನು ವ್ಯಕ್ತಪಡಿಸಿರುವುದಲ್ಲದೆ, ಬಹುಪಾಲು